# ಪ್ರಾಚೀನ ಕಥೆಗಳ ಆದರ್ಶ

ಸುರೇಶ್ ಕುಮಾರ್

## (ರಾಮನಿಗೆ ವಿಶ್ವಾಮಿತ್ರರ ಉಪದೇಶ)

ವಿಶ್ವಾಮಿತ್ರರು ಬಾಲಕಾಂಡದಲ್ಲಿ ರಾಮ, ಲಕ್ಷ್ಮಣರಿಗೆ ಸರ್ವಶ್ರೇಷ್ಠ ಪಾತ್ರಗಳಲ್ಲಿನ ಲೋಕಸೇವಾನಿಷ್ಠೆಯನ್ನು ಮನದಟ್ಟು ಮಾಡಿಸಿದ್ದಾರೆ. ಈ ದೇಶದ ಪ್ರತಿ ನದಿಯ ಹಿಂದೆ ಬೋಧಕ ಇತಿಹಾಸವಿದೆ. ರಾಮ, ಲಕ್ಷ್ಮಣರು ಮುಂದಿನ ಪ್ರಯಾಣದಲ್ಲಿ ತಿಳಿನೀರಿನಿಂದಿದ್ದ ಶೋಣಾ ನದಿಯನ್ನು ದಾಟಿದರು. ಅಂದಿನ ಕಾಲದ ಪರಿಸರ ಪ್ರಜ್ಞೆ ಎಷ್ಟು ಉತ್ತಮವಾಗಿತ್ತೆಂದು ನದಿಯ ತಿಳಿಯಾಗಿದ್ದ ನೀರಿನ ಮೂಲಕ ಅರಿಯುವುದು. ನದಿಯಿಂದ ಉಪಯೋಗ ಪಡೆದ ಜನರು ಕೃತಜ್ಞರಾಗಿ ಅದರ ಸ್ವಚ್ಛತೆಯ ಬಗ್ಗೆ ಲಕ್ಷ್ಯವಿಟ್ಟಿದ್ದರು. ಅವರು ಬಹುದೂರ ಪ್ರಯಾಣಿಸಿ ಋಷಿ-ಮುನಿಗಳಿಂದ ಸೇವಿತಳಾದ ಗಂಗೆಯನ್ನು ಸಂದರ್ಶಿಸಿದರು. ಗಂಗಾತೀರವು ಹಂಸ, ಸಾರಸ ಪಕ್ಷಿಗಳ ಕೂಜನದಿಂದ ನಿನದಿಸುತ್ತಿತ್ತು. ದರ್ಶಿತರೆಲ್ಲರಗೂ ಆನಂದ ನೀಡುವ ಗಂಗೆಯನ್ನು ಕಂಡು ರಾಮ, ಲಕ್ಷ್ಮಣರು ಪುಳಕಿತರಾದರು. ಗಂಗೆಯಲ್ಲಿಳಿದು ಮಿಂದು ಪುನೀತರಾದರು.



### ಗಂಗೆ, ಕಾರ್ತಿಕೇಯ ಇವರ ಕಥೆ

ಪುಣ್ಯಕರ ಗಂಗಾತೀರದಲ್ಲಿ ವಿಶ್ವಾಮಿತ್ರರ ಸುತ್ತ ಬಂದು ಕುಳಿತರು. ರಾಮನು, ''ಮಹಾತ್ಮರೆ, ಈ ನದಿಯು ಹೇಗೆ ತ್ರಿಲೋಕವನ್ನೂ ವ್ಯಾಪಿಸಿ, ತ್ರಿಪಥಗೆ ಎನಿಸಿಕೊಂಡಳು? ಇವಳು ಸಾಗರವನ್ನು ಹೇಗೆ ಸೇರಿದಳು?'' ಎಂದು ಪ್ರಶ್ನಿಸಿದನು. ವಿಶ್ವಾಮಿತ್ರರು ಸಂಕ್ಷಿಪ್ತವಾಗಿ ವಿವರಿಸಲಾರಂಭಿಸಿದರು. ''ರಾಮ, ಹಿಮವಂತನೆಂಬ ಪರ್ವತರಾಜನು ಎಲ್ಲ ಧಾತುಗಳಿಗೆ ಮೂಲ ಸಂಪತ್ತಾಗಿದ್ದಾನೆ. ಮೇರು ಪರ್ವತದ ಮಗಳಾದ ಮೇನೆ ಅವನ ಪತ್ನಿ. ಅವರಿಗೆ ಪರಮ ಸುಂದರಿಯರಾದ ಇಬ್ಬರು ಮಕ್ಕಳು. ಹಿರಿಯವಳು ಗಂಗೆ, ಕಿರಿಯವಳು ಉಮೆ. ಒಮ್ಮೆ ದೇವತೆಗಳು ತಾರಕಾಸುರನ ಸಂಹಾರ ಕಾರ್ಯಕ್ಕಾಗಿ ದೇವ ಸೇನಾನಿಯನ್ನು ಪಡೆಯಲು ಗಂಗೆಯನ್ನು ಕೊಡಬೇಕೆಂದು ಹಿಮವಂತನಲ್ಲಿ ಪ್ರಾರ್ಥಿಸಿದರು. ಹಿಮವಂತನು ಈಗ ಲೋಕ ಪಾವನಿಯಾಗಿರುವ ತನ್ನ ಮಗಳನ್ನು ಮೂರು ಲೋಕಗಳ ಶ್ರೇಯಸ್ಸಿಗಾಗಿ, ಉಪಕಾರಕ್ಕಾಗಿ ಅರ್ಪಿಸಿದನು. ದೇವತೆಗಳು ಗಂಗೆಯನ್ನು ಕೃತಾರ್ಥ ಭಾವದಿಂದ ಪಡೆದು ತೆರಳಿದರು. ಹಿಮವಂತನ ಮತ್ತೊಬ್ಬ ಮಗಳು ವ್ರತನಿಷ್ಠಳಾಗಿ ಶಿವನನ್ನು ಕುರಿತು ಕಠೋರವಾಗಿ ತಪಸ್ಸು ಮಾಡಿದಳು. ಪರಿಣಾಮವಾಗಿ ಉಮಾದೇವಿಯನ್ನು ಮಹಾಮಹಿಮನಾದ ಶಿವನಿಗೆ ಕೊಟ್ಟು ಮದುವೆ ಮಾಡಿದನು. ಅವಳೂ ಸರ್ವಲೋಕ ನಮಸ್ಕೃತಳಾದಳು.

''ರಾಮ, ಶಿವನ ತೇಜಸ್ಸನ್ನು ಗಂಗೆ ಸ್ವೀಕರಿಸಿದಳು. ಅದರ ಪ್ರಖರತೆ ತಡೆಯಲಾಗದೆ ಹಿಮಾಲಯ ಪರ್ವತದ ತಪ್ಪಲಿನಲ್ಲಿ ಹರಿಸಿದಳು. ಆಗ ಅಲ್ಲೊಂದು ದರ್ಭೆಯ ವನ ನಿರ್ಮಾಣವಾಯಿತು. ಅಲ್ಲೊಂದು ಶಿಶು ಪ್ರಕಟವಾಯಿತು. ಅಗ್ನಿಮುಖದಿಂದ ಜನಿಸಿದ ಕಾರಣ ಅಗ್ನಿಸಂಭವನಾದನು. ದರ್ಭೆಯ ವನದಲ್ಲಿ ಜನಿಸಿದ ಕಾರಣ ಶರವಣಭವನೆಂದು ಹೆಸರಾಯಿತು. ಕೃತ್ತಿಕಾ ನಕ್ಷತ್ರದ ಆರು ದೇವತೆಗಳು ಪೋಷಿಸಿದ್ದರಿಂದ ಕಾರ್ತಿಕೇಯನೆಂದು ಕರೆದರು. ಆರು ತಾಯಂದಿರ ಒಟ್ಟಿಗೆ ಸ್ತನ್ಯಪಾನ ಮಾಡಿಸಲು ಇಚ್ಛಿಸಿದ್ದರಿಂದ ಆರು ಮುಖ ಹೊಂದಿ ಷಣ್ಮುಖನಾದನು. ಒಂದೇ ದಿನದಲ್ಲಿ ಬೆಳೆದ ಕುಮಾರಸ್ವಾಮಿ ಸುಬ್ರಹ್ಮಣ್ಯನಾದನು. ಆಕಾಶದಿಂದ ಕೆಳಗೆ ಗರ್ಭ ಜಾರಿ ಬಿದ್ದುದರಿಂದ ಸ್ಕಂದ ಎಂಬುದು ಅವನ ಮತ್ತೊಂದು ನಾಮಧೇಯ. ಅವನು ತಾರಕಾಸುರನನ್ನು ಎದುರಿಸಿ, ಹೋರಾಡಿ ಸಂಹರಿಸಿದನು. ಲೋಕದಲ್ಲಿ ಮತ್ತೆ ನಿರ್ಭಯತೆ, ಶಾಂತಿ, ಸಮಾಧಾನಗಳನ್ನು ನೆಲೆಗೊಳಿಸಿದನು.''

### ತಾಯಂದಿರ ಆದರ್ಶ

''ಮಗುವನ್ನು ಪಾಲನೆ, ಪೋಷಣೆ ಮಾಡಿ ಅದರಲ್ಲಿ ವ್ಯಕ್ತಿತ್ವ ಅರಳಿಸುವ ಮಾತೃಶಿಲ್ಪಿಗಳ, ಪೊರೆದವರ ಅಪೇಕ್ಷೆ ಬಹಳ ಕಡಿಮೆಯಿರುವುದು. ಕೃತ್ತಿಕಾದಿ ದೇವತೆಗಳ ಆಸೆಯೆಂದರೆ ತಾವು ಮಗು

ವನ್ನು ಸಂಕಷ್ಟದಲ್ಲಿರುವಾಗ ಕಾಪಾಡಿದಂತೆ, ಆ ಮಗು ಲೋಕವನ್ನು, ಸಜ್ಜನರನ್ನು ಸಂಕಷ್ಟದಲ್ಲಿ ಕಾಪಾಡಬೇಕೆಂದು – ಇದೇ ಮಕ್ಕಳ ಆದರ್ಶ, ನಡವಳಿಕೆಯಾಗಬೇಕು. ಇಲ್ಲಿ ಗಂಗೆಯಲ್ಲಿ, ಕೃತ್ತಿಕಾದಿ ದೇವತೆಗಳಲ್ಲಿ ತ್ಯಾಗದ ಸುಗಂಧವಿದೆ.

‘‘ತಾಯಂದಿರ ಘನತೆ, ಗೌರವಕ್ಕೆ ಆದರವಾಗುವಂತೆ ಮಕ್ಕಳ ನಡವಳಿಕೆಯಿರಬೇಕು. ಕಾರ್ತಿಕೇಯನೇನೂ ಕೃತ್ತಿಕಾದಿ ದೇವತೆಗಳು ಹೆತ್ತ ಮಗನಲ್ಲ, ಆದರೂ ತಾಯಿಯಂತೆ ನಡೆದರು. ಅದೇ ಗುಣ ಆ ಮಗನಲ್ಲಿ ಪ್ರಕಟವಾಗಬೇಕೆಂದು ಬಯಸಿದರು. ಅದೇ ಭಾವದಿಂದ ಹಾಲೂಡಿಸಿದರು. ಆ ಭಾವವೇ ಸಂಸ್ಕಾರವಾಯಿತು. ಆ ಮಗುವಿನ ಮನದಲ್ಲಿ ಬೀಜವಾಯಿತು. ತಕ್ಷಣವೇ ಬೆಳೆಯಿತು. ಬೆಳೆದು ಕುಮಾರನಾದ, ಸರ್ವರ ಸಂರಕ್ಷಣೆಗಾಗಿ ದೇವಸೇನಾನಿಯಾದ. ತಾರಕಾಸುರನನ್ನು ಸಂಹರಿಸಿದ. ದುಷ್ಟ ಶಿಕ್ಷಣ, ಶಿಷ್ಟ ಸಂರಕ್ಷಣೆಯೇ ಪುತ್ರನ ಪಾಲಿನ ಮಹತ್ತರ ಕರ್ತವ್ಯ. ಇಂತಹ ಪುತ್ರ ಸದಾ ಪೂಜ್ಯ ಹಾಗೂ ಲೋಕಮಾನ್ಯ. ಈ ಕಾರಣದಿಂದ ಅವನು ದೇವರೇ ಆಗುವನು. ಅವನ ಭಕ್ತನಾದವನೂ ಅವನ ಗುಣಗಳ ಚಿಂತನೆ, ಆರಾಧನೆ, ಆಚರಣೆಗಳಿಂದ ಸಾತ್ತ್ವಿಕ ಪರೋಪಕಾರಿ ಸಜ್ಜನನಾಗಿ ಮುಕ್ತಿ ಪಡೆಯುವನು.

‘‘ಗಂಗೆಯು ಕಾರ್ತಿಕೇಯನ ಉತ್ಪತ್ತಿಯಲ್ಲಿ, ಅವನು ದೇವಸೇನಾನಿಯಾಗಿ ದೈತ್ಯ ಸಂಹಾರ ಮಾಡಿ, ದೇವತೆಗಳಿಗೆ ಹಿತ ಮಾಡಿದ್ದರಲ್ಲಿ ಧನ್ಯತೆಯನ್ನು ಪಡೆದಿದ್ದಾಳೆ. ಹೀಗಾಗಿ ಅವಳು ಮಾತೆಯಲ್ಲ, ಮಹಾಮಾತೆ. ತಾಯಂದಿರಲ್ಲಿ ಇರುವ ಗುಣವೂ ಇದೇ ಆಗಿದೆ. ಎಲ್ಲ ಕಾಲಗಳಿಗೂ ಈ ಮನೋಭಾವ, ನಡವಳಿಕೆ, ಅನುಸರಣೀಯವಾಗಿದೆ. ತನಗೇ ತೊಂದರೆಯಾದರೂ, ಸಹನೆಯಿಂದ ಸಮಷ್ಟಿಯ, ಪರರ ಹಿತಕ್ಕೆ ಸರ್ವವನ್ನೂ ಸಹಿಸಿದ ಗಂಗೆ ತನ್ನನ್ನೇ ಸಮರ್ಪಿಸಿಕೊಂಡಿದ್ದಾಳೆ. ಈ ಭಾವದ ನಿಲುವಿದ್ದವರೆಲ್ಲರೂ ತಾಯಿಯಾಗುವರು. ಈ ಗುಣ ಪ್ರಕಟವಾಗುವ ಎಲ್ಲವನ್ನೂ ನಾವು ತಾಯಿ ಸಮಾನವಾಗಿ ಕಂಡೆವು. ಈ ಗುಣ ಪ್ರಕಟಿಸಿದವರೆಲ್ಲರೂ ತ್ಯಾಗದ, ಸೇವೆಯ ಮೂರ್ತಿಯಾಗುವರು, ಮಾತೃಸಮಾನರಾಗುವರು. ಎಲ್ಲೆಲ್ಲಿ ಈ ವಿಶೇಷಣಗಳು ಮೇಳೈಸುವುವೋ, ಅಲ್ಲೆಲ್ಲ ‘ಮಾತೆ’ ವಿಶೇಷಣವನ್ನು ಸೇರಿಸುವುದು ನಮ್ಮ ಸನಾತನ ಸಂಸ್ಕೃತಿಯ ಹಿರಿಮೆ. ಉದಾಹರಣೆಗೆ ಗೋಮಾತೆ, ಭೂಮಾತೆ, ಗೀತಾಮಾತೆ, ವೇದಮಾತೆ, ಗಾಯತ್ರಿಮಾತೆ, ಗಂಗಾಮಾತೆ, ಭಾರತಮಾತೆ ಇತ್ಯಾದಿ. ಹೀಗಾಗಿ ನಾವು ಬಳಸುವ ಯಾವುದೇ ಕೆರೆ, ಕಟ್ಟೆ, ಭಾವಿ, ಕೊಳ, ಹೊಳೆ ಅಥವಾ ನಳದ ನೀರಿರಲಿ ಅದನ್ನು ಗಂಗೆ ಎನ್ನುತ್ತೇವೆ.’’

### ಪರ್ವತರಾಜನ ಮಹಿಮೆ

‘‘ಒಂದು ಶ್ರೇಷ್ಠವಾದ, ಉತ್ತಮವಾದ ವಸ್ತು ನಮ್ಮಲ್ಲಿರುವುದು. ಅದು ಕೇವಲ ನಮಗಾಗಿರದೆ, ಎಲ್ಲರ ಉಪಕಾರಕ್ಕಾಗಿರುವುದು. ಯಾರಲ್ಲಿ ಅದು ಇದೆಯೋ ಅವರು ಎಲ್ಲರಿಗೂ ಉಪಕಾರವಾಗಲು ಸಹಕಾರ ಕೊಡಬೇಕು. ದೇವತೆಗಳ ಪ್ರಾರ್ಥನೆಯಲ್ಲಿನ ಯಥಾರ್ಥತೆಯನ್ನು ಅರಿತ ಪರ್ವತರಾಜ ಹಿಮವಂತನು ಅವರಿಗೆ ಮಗಳನ್ನು ಕೊಟ್ಟ. ಮೆಚ್ಚಿನ ಸುತೆಯನ್ನು ಸಲ್ಲಿಸುವುದರಲ್ಲಿ ಸಾರ್ಥಕತೆ ಪಡೆದು, ಪಾರಮಾರ್ಥಿಕತೆಯನ್ನು ಗಳಿಸಿದ. ಮೇಲಿನವರು ಬಂದು ತನ್ನಲ್ಲಿ ಬೇಡಿದಾಗ ಕೊಟ್ಟ. ಕೆಳಗಿನವನಾದರೂ ಮೇಲಿನವರಿಗಿಂತಲೂ ಮೇಲಿನವನಾದ. ಗಂಗೆ ಮತ್ತೂ ಮೇಲಿನವಳಾದಳು. ಹೀಗೆ ತಂದೆ, ತಾಯಿ, ಮಗಳು ಮೂವರೂ ಕೊಡುವುದರ ಶ್ರೇಷ್ಠತೆಯಿಂದ ಮೆರೆದಿದ್ದಾರೆ. ಸಮಾಜದ ಹಿತಕ್ಕಾಗಿ, ವಿಶ್ವಕಲ್ಯಾಣಕ್ಕಾಗಿ ತ್ಯಾಗ. ಪರರಿಗೆ ಒಳಿತಾಗುವುದು ನಿನ್ನಲ್ಲಿದ್ದರೆ ಅದನ್ನು ಕೊಡು. ಅಷ್ಟೇ ಅಲ್ಲ, ಪರೋಪಕಾರದ ಸದ್ಗುಣವನ್ನು ಕುಟುಂಬದ ಸದಸ್ಯರಿಗೆ ಸಂಸ್ಕಾರ ಕೊಟ್ಟು ಬೆಳೆಸುವುದು ನಮ್ಮ ಬಹಳ ಹಿಂದಿನ ಪದ್ಧತಿ. ಒಳ್ಳೆಯತನ ವ್ಯಕ್ತಿಯೊಬ್ಬನಲ್ಲಿದ್ದರೆ ಮಾತ್ರ ಸಾಲದು, ಅವನ ಕುಟುಂಬದವರೆಲ್ಲರಲ್ಲಿಯೂ ಆ ಗುಣ ಬಿಂಬಿತವಾಗಬೇಕು. ಈ ಸಂದೇಶ ಮೇಲಿಂದ ಮೇಲೆ ಬಿಂಬಿತವಾಗಿದೆ ರಾಮಾಯಣದಲ್ಲಿ. ಋಷ್ಯಶೃಂಗನನ್ನು ಕರೆತರಲು ವೇಶ್ಯೆಯರು ನಾಡಿನಿಂದ ಕಾಡಿಗೆ ಹೋದರು. ನಾಡಿಗೆ ಸುಭಿಕ್ಷೆ ತರಲು ಋಷ್ಯಶೃಂಗನು ಕಾಡಿನಿಂದ ನಾಡಿಗೆ ಬಂದನು. ರಾಮ ಜನನದ ಕಾರಣಕರ್ತನಾಗಿ ಅಂಗದೇಶದಿಂದ ಅಯೋಧ್ಯೆಗೆ ಬಂದನು. ಅಸುರರನ್ನು ಸಂಹರಿಸಲು ರಾಮನು ಅಯೋಧ್ಯೆಯಿಂದ ವಿಶ್ವಾಮಿತ್ರರೊಡನೆ ಸಿದ್ಧಾಶ್ರಮಕ್ಕೆ ಹೊರಟನು. ಇದರಲ್ಲಿ ಸ್ವಲ್ಪ ತಪ್ಪಿದ ದಶರಥನು ರಾಮನನ್ನು ಕಳುಹಿಸಲು ಗೋಗರೆದನು. ವಸಿಷ್ಠರು ಅದನ್ನು ಸರಿ ಮಾಡಿದರು. ಆದರೆ ಪರ್ವತರಾಜನು ಮಗಳನ್ನೇ ದಾನವಾಗಿ ಕೊಟ್ಟು ದಶರಥನಿಗಿಂತ ಸಾವಿರ ಹೆಜ್ಜೆ ಮುಂದಿದ್ದಾನೆ.’’

ರಾಮ, ಲಕ್ಷ್ಮಣರು ತದೇಕ ಚಿತ್ತರಾಗಿ ಕೇಳುತ್ತಿದ್ದರು. ವಿಶ್ವಾಮಿತ್ರರ ಕಥೆಯಿಂದ ಅವರ ಕುತೂಹಲ ಅರಳಿತು. ಅವರ ಜಿಜ್ಞಾಸೆ, ಜ್ಞಾನದಾಹ ತಣಿಯದೆ ಹೆಚ್ಚಾಯಿತು. ರಾಮನ ಮಾತುಗಳು ಜ್ಞಾನನಿಧಿ ಗುರುವನ್ನು ಪ್ರಚೋದಿಸಿವೆ. ಜ್ಞಾನಗಂಗೆ ಪ್ರವಹಿಸುವಂತೆ ಮಾಡಿದೆ. ಅವರಿಬ್ಬರು, ‘‘ಗುರುಗಳೆ, ನೀವು ಹೇಳಿದ ವಿಷಯ ಪುಣ್ಯಕರವಾಗಿದೆ. ಗಂಗೆಯ ಚರಿತ್ರೆಯನ್ನು ದಯಮಾಡಿ ವಿವರವಾಗಿ ತಿಳಿಸಿರಿ. ಆ ವಿಶ್ವಕಲ್ಯಾಣಿಯು ಭೂಲೋಕದಲ್ಲಿ ನಡೆಸಿದ ವಿಶೇಷವೇನು?’’ ಎಂದರು.

ವಿಶ್ವಾಮಿತ್ರರು ಎಲ್ಲವನ್ನೂ ಒಂದೇ ಬಾರಿಗೆ ಹೇಳಲಿಲ್ಲ. ಸಣ್ಣದಾಗಿ ಹೇಳಿ ಆಸಕ್ತಿ, ಶ್ರದ್ಧೆ ನಿರ್ಮಾಣ ಮಾಡಿದ್ದಾರೆ. ವಿದ್ಯಾರ್ಜನೆಯಲ್ಲಿ ಇದೇ ಅತಿ ಮುಖ್ಯವಾದದ್ದು. ಶಿಕ್ಷಕನ ಸ್ವಾರ್ಥ ಲಾಭಕ್ಕೆ ಅವಕಾಶವಿರದು. ಶುಲ್ಕ ರಿಯಾಯತಿ, ಜಾಹೀರಾತು, ಅಲ್ಪ ಅವಧಿ ಅಥವಾ ದೇಣಿಗೆಯಿಂದ ವಿದ್ಯೆಯ ಪ್ರಸಾರವಾಗುತ್ತಿರಲಿಲ್ಲ. ಶ್ರದ್ಧೆ, ಆಸಕ್ತಿಗಳೊಡನೆ ಪರಿಶ್ರಮಯುಕ್ತ ಪ್ರಯತ್ನಶೀಲರಿಗೆ ಮಾತ್ರ ವಿದ್ಯಾಪ್ರದಾನವಾಗುತ್ತಿತ್ತು. ಕೇವಲ ಅಧಿಕಾರ, ಧನಬಲವಿದ್ದವರಿಗೆ ವಿದ್ಯೆ ಸಿಗುತ್ತಿರಲಿಲ್ಲ.

## ಸಗರನ ತಪಸ್ಸು

ಅವರ ಶ್ರದ್ಧೆಗೆ ವಿಶ್ವಾಮಿತ್ರರು ಸ್ಪಂದಿಸಿ ಮುಂದುವರಿಸಿದರು. ಗಂಗೆಯು ಧರೆಗಿಳಿದ ಇಕ್ಷ್ವಾಕು ವಂಶದ ಕಥಾನಕವನ್ನು ಹೇಳಲಾರಂಭಿಸಿದರು. ''ವತ್ಸ ರಾಮ, ಹಿಂದೆ ನಿಮ್ಮ ವಂಶದ ಸಗರನೆಂಬ ರಾಜನು ಅಯೋಧ್ಯೆಯ ಅಧಿಪತಿಯಾಗಿದ್ದನು. ರಾಮ, ಸಗರನು ವಂಶೋದ್ಧಾರಕರಿಲ್ಲದೆ ಹಂಬಲಿಸುತ್ತಿದ್ದನು. ಚಕ್ರವರ್ತಿಯಾದ ಸಗರನು ರಾಜಭೋಗ ಬಿಟ್ಟು ಹಿಮಾಲಯದ ಚಳಿಯಲ್ಲಿ ಸಹನೆಯಿಂದ ಸಾಧನೆ ಮಾಡಿದನು. ರಾಮ, ಸಗರನು ಬಹಳ ತಾಳ್ಮೆಯಿಂದ ನಡೆದಿದ್ದಾನೆ. ಯಾವುದಕ್ಕೂ ಅವಸರ ಪಡಬಾರದು. ಭಗವದನುಗ್ರಹ, ಗುರುಕೃಪೆಯಾಗಲು ಪರಿಶ್ರಮ, ಸಾಧನೆ, ತಪಸ್ಸು ನಡೆಯಬೇಕು. ಪ್ರಾಮಾಣಿಕ ಸಾಧನೆಯಿರಬೇಕು. ಸಗರನ ನೂರು ವರ್ಷಗಳ ತಪಸ್ಸಿನಿಂದ ಆರಾಧಿತರಾದ ಭೃಗು ಮಹರ್ಷಿಗಳು ಸುಪ್ರೀತರಾಗಿ ಹರಸಿ ಆಶೀರ್ವದಿಸಿದರು. ಮಕ್ಕಳೇ ಇರದ ರಾಜನಿಗೆ ಅರವತ್ತು ಸಾವಿರದ ಒಂದು ಮಕ್ಕಳಾದರು. ಅವರೆಲ್ಲರು ಸದ್ಗುಣ ಸಂಪನ್ನರಾದರು.''

## ಸಗರನ ಮಗ ಅಸಮಂಜಸ

''ಆದರೆ ಹಿರಿಯ ಮಗನಾದ ಅಸಮಂಜನೆಂಬವನ ನಡತೆ ಚೆನ್ನಾಗಿರಲಿಲ್ಲ. ಬಾಲ್ಯದಿಂದಲೇ ಕೆಟ್ಟ ಕೆಲಸಗಳಲ್ಲಿ ತೊಡಗುತ್ತಿದ್ದನು. ಹಾಗೆಯೇ ಬೆಳೆದು ದೊಡ್ಡವನಾದನು. ರಾಮ, ಕೆಲವು ತಂದೆ-ತಾಯಂದಿರಿಗೆ ಇಂತಹ ಮಕ್ಕಳಿಗೆ ಮದುವೆಯಾದರೆ ಸರಿಯಾಗುವರೆಂಬ ಭ್ರಮೆ ಇರುವುದು. ಅವನಿಗೆ ಮದುವೆಯನ್ನೂ ಮಾಡಿದರು. ಅವನ ಮಗನೇ ಅಂಶುಮಂತ. ಪ್ರಿಯಭಾಷಿಯಾಗಿದ್ದ ಅವನು ಸದ್ಗುಣವಂತನಾಗಿ ಎಲ್ಲರ ಪ್ರೀತಿಗೆ ಪಾತ್ರನಾದನು. ತಂದೆ ಅಸಮಂಜನು ಹೆಸರಿಗೆ ತಕ್ಕಂತೆ ಕೆಟ್ಟ ಕೆಲಸಗಳನ್ನೇ ಮಾಡುತ್ತಿದ್ದನು. ಅವನು ಬೀದಿಯಲ್ಲಿ ಆಟವಾಡುತ್ತಿದ್ದ ಮಕ್ಕಳನ್ನು ಹಿಡಿದು ಅವುಗಳ ಕೈ, ಕಾಲುಗಳನ್ನೂ, ಗೋಣನ್ನೂ ಮುರಿದು ಕ್ರೂರ ಹಿಂಸೆ ಮಾಡಿ ಕೊಲ್ಲುತ್ತಿದ್ದನು. ಅವು ಜೀವ ಬಿಡುವುದನ್ನು ನೋಡಿ ಅಟ್ಟಹಾಸದಿಂದ ನಗುತ್ತಿದ್ದನು. ಆ ದುಷ್ಟನಿಗೆ ಇದೊಂದು ವಿನೋದವಾಗಿತ್ತು. ಸಹನಶೀಲ ಪ್ರಜೆಗಳು ಬಹಳ ಸಮಯ ನೋಡಿದರು. ಆದರೆ ದಿನದಿಂದ ದಿನಕ್ಕೆ ಇದು ಹೆಚ್ಚಾಯಿತು. ಅಯೋಧ್ಯೆಯ ಪ್ರಜೆಗಳ ತಾಳ್ಮೆಯ ಕಟ್ಟೆಯೊಡೆಯಿತು. ಆಕ್ರೋಶವಿದ್ದರೂ ಅವರು ಸಗರ ಮಹಾರಾಜನ ರಾಜಸಭೆಯನ್ನು ಮರ್ಯಾದೆಯ ಮಿತಿಯಲ್ಲಿಯೇ ಪ್ರವೇಶಿಸಿದರು. ಎಲ್ಲವನ್ನೂ ವಿವರವಾಗಿ ಸಗರನಲ್ಲಿ ಬಿನ್ನವಿಸಿದರು.''

## ಸಗರನ ಕಠಿಣ ನಿರ್ಧಾರ

''ಸಗರನು ಎಲ್ಲವನ್ನೂ ವಿವರವಾಗಿ ಆಲಿಸಿದನು. ನ್ಯಾಯ ನೀಡುವ ಮಂಡಳಿಯನ್ನೊಮ್ಮೆ ದಿಟ್ಟಿಸಿ ನೋಡಿದನು. ತನ್ನ ಮಗನ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪನ್ನು ತಾನೇ ನೀಡುವುದಾಗಿ ಘೋಷಿಸಿದನು. ತಕ್ಷಣವೇ ತನ್ನ ಮಗ ಹಾಗೂ ಸೊಸೆಯನ್ನು ಕರೆತರಲು ಸೇವಕರಿಗೆ ಆಜ್ಞಾಪಿಸಿದನು. ಪತ್ನೀಸಮೇತನಾಗಿ ಅಸಮಂಜನನ್ನು ರಾಜಸಭೆಯಲ್ಲಿ ಹಾಜರುಪಡಿಸಿದರು. ತೀರ್ಪನ್ನು ಪ್ರಕಟಿಸುವ ಕ್ಷಣ ಹತ್ತಿರವಾಯಿತು. ಜನತೆ ಚಿತ್ರಪಟದಂತೆ ಸ್ತಬ್ಧವಾಯಿತು. ಸಗರ ಮಹಾರಾಜನು ಸಜ್ಜನ ಪೀಡಕ ಮಗನ ಹಗರಣದ ಬಗ್ಗೆ ನ್ಯಾಯ ಘೋಷಿಸಿದನು. 'ಇಂದಿನಿಂದ ನನ್ನ ಮಗನನ್ನು ಪತ್ನೀಸಮೇತನಾಗಿ ಆಜೀವ ಪರ್ಯಂತ ದೇಶಭ್ರಷ್ಟನನ್ನಾಗಿ ಮಾಡಿರುವೆ. ಅವರಿಬ್ಬರೂ ಜೀವನದ ಕೊನೆಯವರೆಗೂ ಕಾಡಿನಲ್ಲಿಯೇ ಕಳೆಯಬೇಕು. ಅವರಿಗೆ ಇಡೀ ದೇಶದಲ್ಲಿ ಪುರ, ಪಟ್ಟಣ, ಗ್ರಾಮಗಳಲ್ಲಿ ಜೀವಿಸಲು ಯಾರೂ ಅವಕಾಶ ಕೊಡಬಾರದು. ಮಹಾರಾಜನ ಮಗ ಸೊಸೆಯೆಂದು ಯಾರೂ ಮರುಕ ತೋರಬಾರದು. ಮಾನವೀಯತೆಯ ದೃಷ್ಟಿಯಿಂದ ಈ ಹಾರೆ, ಬುಟ್ಟಿಗಳೇ ಅವರಿಗೆ ಆಧಾರ. ಕಾಡಿನಲ್ಲಿ ಸಿಗುವ ಗೆಡ್ಡೆ, ಗೆಣಸುಗಳನ್ನಷ್ಟೇ ತಿಂದು ಜೀವಿಸಬೇಕು. ಸದ್ಗುಣ ಸಂಪನ್ನನಾದ ಅವನ ಮಗನ ಸಂರಕ್ಷಣೆಯ ಹೊಣೆಯನ್ನು ನಾನು ಹೊತ್ತಿರುವೆ' ಎಂದನು.

''ನಿರಾಸೆಯಾಗುವುದೇನೂ ಆಶ್ಚರ್ಯವಲ್ಲ. ಆಗದಿದ್ದರೆ ಅಚ್ಚರಿಪಡಬೇಕು. ನಾವೇ ಕಸಿ ಮಾಡಿ ಹಾಕಿದ ಮಾವಿನ ಮರ ಬೆಳೆದು ದೊಡ್ಡದಾಗಿದೆ. ಹೂ ಕಳೆದು ಕಾಯಿಗಳಾಗಿವೆ. ಸಿಹಿ ಸಿಹಿಯಾದ ಹಣ್ಣುಗಳನ್ನು ನಿರೀಕ್ಷಿಸುತ್ತಿದ್ದೇವೆ. ಹಣ್ಣೂ ಆಯಿತು. ಬಾಯಿಗೆ ಇಟ್ಟಾಗ ಅದು ಕಹಿಯಾಗುವುದೆ? ಒಗರಾಗಿರುವುದೆ? ನಾವು ಏನೂ ಮಾಡಲು ಸಾಧ್ಯವಾಗದು. ಪರಿಣಾಮಕ್ಕೆ ಸಿದ್ಧರಾಗಿರಬೇಕಷ್ಟೆ. ಇದೊಂದೇ ದಾರಿ ನಮಗಿರುವುದು. ಭೂಮಿಯಲ್ಲಿ ಅನೇಕ ವಿಧವಾದ ರಸ ತತ್ತ್ವಗಳಿವೆ. ಅವುಗಳ ಕಾರಣದಿಂದ ಹಣ್ಣಿನ ರುಚಿಯು ಭಿನ್ನವಾಗಿರುವದು. ಜೀವನದಲ್ಲಿ ನಾವು ನಿರೀಕ್ಷಿಸಿದ್ದು ಹಲವಾರು ಕಾರಣಗಳಿಂದ ಆಗದಿರಬಹುದು. ಆ ಕಾರಣಗಳನ್ನು ಹುಡುಕಲು ನಮ್ಮಿಂದ ಸಾಧ್ಯವಾಗುವುದೆ? ಒಂದು ವೇಳೆ ಅವುಗಳು ತಿಳಿದರೂ ನಾವು ಏನು ಮಾಡಲಾಗುವುದು? ಅದರಿಂದ ತಲೆ ಕೆಡಿಸಿಕೊಳ್ಳುವುದಷ್ಟೇ ಲಾಭವಾಗುವುದು. ಎಲ್ಲವೂ ಆ ದೈವಕ್ಕೆ ಸರಿಯಾಗಿ ತಿಳಿದಿರುವುದು. ಅದರ ಚಿಂತೆಯನ್ನು ಅದಕ್ಕೇ ಬಿಡೋಣ.

''ಸಿಂಹಾಸನ ಏರಬೇಕಾದವನು ದುಷ್ಟನಾದದ್ದು ದುರ್ದೈವ. ಪಟ್ಟಗಟ್ಟಬೇಕಾದ ಅಪ್ಪನೇ ದುಷ್ಟ-ಭ್ರಷ್ಟ ಮಗನನ್ನು ರಾಜ್ಯದಿಂದ ಹೊರಗಟ್ಟಿದ. ಅದು ಜನತೆಯ ಹಿತದೃಷ್ಟಿಯಿಂದ ಉತ್ತಮ ನಿರ್ಣಯ. ಸರ್ವಶ್ರೇಷ್ಠ ಕಾರ್ಯಾಚರಣೆ. ದೇಶ, ಸಮಾಜಗಳ ಕಂಟಕನು ಯಾರೇ ಆಗಿದ್ದರೂ ತಾರತಮ್ಯ ಸಲ್ಲದು. ಮಗನಿಗೆ ಪಟ್ಟಗಟ್ಟುವುದೇ ಸಗರನ ಆಸೆ ಇದ್ದಿರಬಹುದು. ಆದರೆ ನಮ್ಮ ಆಸೆ ಏನೇ ಇದ್ದರೂ ಭಗವಂತ ಕೊಟ್ಟದ್ದನ್ನು ಸ್ವೀಕರಿಸಬೇಕಲ್ಲವೆ?'' ಎಂದರು ವಿಶ್ವಾಮಿತ್ರರು. ಸಗರನೂ ಅಂತೆಯೇ ನಡೆದಿರುವನು. ಬಂದದ್ದನ್ನು ಬಂದಂತೆ ಸ್ವೀಕರಿಸಿರುವನು. ✸